be formulated and put. But only to substantiate main view point I am just quoting an example. ಈಗ ಏನಾಗುತ್ತದೆ ಎಂದರೆ ಈ ಸಕ್ಕರೆ ಕಾರ್ಖಾನೆಗಳಿಗೆ ಸಾಮಾನು ಕೊಡಲಿಕ್ಕೆ ಬರುವವರು ಫೈವ್ ಸ್ಟಾರ್ ಹೋಟೆಲ್‌ನಲ್ಲಿ ಹವಾ ನಿಯಂತ್ರಣ ಕೊಠಡಿಯಲ್ಲಿ ಇದ್ದು ನಾವು ತೆಗೆದುಕೊಳ್ಳುವವರು ಕೋಟ್ಯಾಂತರ ರೂಪಾಯಿ ಕೊಡುವವರು 59 ರೂಪಾಯಿ, 60 ರೂಪಾಯಿ, 80 ರೂಪಾಯಿಗೋ ಕೆಂಚಾಂಬ ಲಾಡ್ಜ್‌ಗೆ ಹೋಗಿ ಉಳಿಯಬೇಕಾಗುತ್ತದೆ. ಆ ಪರಿಸ್ಥಿತಿಯಲ್ಲಿ ನಾವು ಹೋಗಿ ಕೋಟ್ಯಾಂತರ ಗಟ್ಟಲೆ ವ್ಯವಹಾರ ಮಾಡುವವರು ನಿಲ್ಲುವುದಕ್ಕೇ ಸ್ಥಳವಿಲ್ಲ. ಮಾನ್ಯ ಮಂತ್ರಿಗಳು ಇದಕ್ಕೆ ತಕ್ಷಣ ಪರಿಹಾರ ತಂದುಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ:- ಮಾನ್ಯ ಅಧ್ಯಕ್ಷರೇ, ಇದು ಒಂದು ಟೈಮ್ ಮಿತಿ ಹಾಕಿ ಪ್ರಕರಣಗಳನ್ನು ಇತ್ಯರ್ಥ ಮಾಡಲಿಕ್ಕೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಅದು ಆಗುವುದಿಲ್ಲ. ಅದಕ್ಕೆ ಕಾಲಮಿತಿಯನ್ನು ಮಾಡಬೇಕಾದರೆ ತಿದ್ದಪಡಿಯನ್ನೇ ನಾವು ಮಾಡಬೇಕಾಗುತ್ತದೆ. ಅದರ ಬಗ್ಗೆ ನೋಡೋಣ. ಅದರ ಬಗ್ಗೆ ನಮ್ಮ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಕನ್‌ಸಿಡರ್ ಮಾಡುತ್ತೇನೆ. ಆದರೆ ಅಲ್ಲಿ ಪೀಠೋಪಕರಣಗಳ ಬಗ್ಗೆ ಹೇಳುತ್ತಿದ್ದಾರೆ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ, ನಾನು ಈಗಾಗಲೇ ಹೇಳಿದ್ದೇನೆ, ಆದ್ಯತೆಯ ಮೇರೆಗೆ ಸರ್ಕಾರದಲ್ಲಿ ಆಗಿರುವ ಹಣದ ವ್ಯವಸ್ಥೆಯನ್ನು ನೋಡಿ ಆದ್ಯತೆಯ ಮೇರೆಗೆ ಪೀಠೋಪಕರಣಗಳಾಗಿರಬಹುದು.

11-40 ಎ.ಎಂ

ಸಬ್‌ರಿಜಿಸ್ಟರ್ ಕಛೇರಿಯ ಕಟ್ಟಡಗಳು ಕೂಡ ಆಗಿರಬಹುದು. ಉದಾಹರಣೆಗೆ ಈಗ ಹತ್ತು ವರ್ಷಗಳ ಹಿಂದೆ ಇದರ ಆದಾಯ ಬರೇ 40 ಕೋಟಿ ರೂಪಾಯಿ ಇತ್ತು. ಇವತ್ತು ಸುಮಾರು 600 ಕೋಟಿ ರೂಪಾಯಿಗಳ ಆದಾಯ ಈ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಾಣಿಕೆಯಿಂದ ಬರುತ್ತಿದೆ. ಅದಕ್ಕೆ ಆದ್ಯತೆಯ ಮೇರೆಗೆ ನಾವು ಎಲ್ಲವನ್ನೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ತಮ್ಮ ಮುಖಾಂತರ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ವಿಷಯ:- ರಾಜ್ಯದ ಹೊರಗಡೆ ಇರತಕ್ಕ ಮುಜರಾಯಿ ಇಲಾಖೆಯ ಪ್ರವಾಸಿಗರ ಛತ್ರಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 89 (599)

ಶ್ರೀ ಮಂಜುನಾಥ ಸಿ.ಕುನೂರ್ (ಶಿಗ್ಗಾಂವ್):- ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕ ರಾಜ್ಯ ಮುಜರಾಯಿ ಇಲಾಖೆಯಿಂದ ರಾಜ್ಯದಲ್ಲಿ ಹಾಗೂ ರಾಜ್ಯದ

ಹೊರಗಡೆ ಎಷ್ಟು ಪ್ರವಾಸಿಗರ ಛತ್ರಗಳಿವೆ, ಅವು ಯಾವುವು?

ಆ) ಆಂಧ್ರ ಪ್ರದೇಶದ ತಿರುಪತಿಯಲ್ಲಿ ಹಾಗೂ ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಪ್ರವಾಸಿಗಳ ಛತ್ರಗಳಲ್ಲಿ ಸರಿಯಾದ ಸೌಲಭ್ಯವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಬಿ.ಮುನಿಯಪ್ಪಮುದ್ದಪ್ಪ (ಮುಜರಾಯಿ ಸಚಿವರು):-

ಅ) ರಾಜ್ಯದ ಒಳಗೆ ಮುಜರಾಯಿ ಇಲಾಖೆಯಲ್ಲಿ ನಿರ್ವಹಣೆಯಲ್ಲಿ ಪ್ರವಾಸಿಗರ ಛತ್ರಗಳಿಲ್ಲ, ಹೊರ ರಾಜ್ಯಗಳಾದ ಆಂಧ್ರಪ್ರದೇಶದ ತಿರುಮಲೆ ಶ್ರೀಶೈಲ, ಮಂತ್ರಾಲಯ ಮತ್ತು ಉತ್ತರ ಪ್ರದೇಶದ ವಾರಣಾಸಿಯಲ್ಲಿ ಪ್ರವಾಸಿಗರ ಛತ್ರಗಳಿವೆ.

ಆ) ಬಂದಿದೆ.

ಇ) ತಿರುಮಲದಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಮೊದಲನೇ ಹಂತದ ದುರಸ್ಥಿ ಮತ್ತು ನವೀಕರಣ ಕೆಲಸಕ್ಕಾಗಿ ರೂ. 18.50 ಲಕ್ಷ ಅಂದಾಜುವೆಚ್ಚಕ್ಕೆ ಮಂಜೂರಾತಿ ನೀಡಲಾಗಿದ್ದು, ಈ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಇದರಿಂದ ತಿರುಮಲದಲ್ಲಿರುವ ಕರ್ನಾಟಕ ಪ್ರವಾಸಿ ಸೌಧ, ಕರ್ನಾಟಕ ಕಲ್ಯಾಣ ಮಂಟಪ ಹಾಗೂ ಅತಿಥಿ ಗೃಹಗಳನ್ನು ದುರಸ್ಥಿ ಮಾಡಿ ನವೀಕರಿಸಿ ಪ್ರವಾಸಿಗಳಿಗೆ ಹೆಚ್ಚಿನ ಸೌಲಭ್ಯ ನೀಡಲಾಗುತ್ತಿದೆ. ವಾರಣಾಸಿಯ ಕರ್ನಾಟಕ ರಾಜ್ಯ ಛತ್ರವು ಗಂಗಾನದಿಯ ದಡದಲ್ಲಿರುವ ಕಟ್ಟಡದ ದುರಸ್ಥಿಗಾಗಿ ರೂ. 3.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ದುರಸ್ಥಿ ಕಾರ್ಯವನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಗೆ ತಿಳಿಸಲಾಗಿದೆ. ಹಿಂಭಾಗದಲ್ಲಿರುವ ಹಳೆಯ ಕಟ್ಟಡದ 'ಪುನರ್ ನಿರ್ಮಾಣಕ್ಕಾಗಿ ರೂ. 5.00 ಲಕ್ಷವನ್ನು ಸರ್ಕಾರ ಮಂಜೂರು ಮಾಡಿದ್ದು, ಉಳಿದ ಹಣವನ್ನು ರಾಜ್ಯದ ಹೆಚ್ಚಿನ ಆದಾಯವಿರುವ ದೇವಸ್ಥಾನಗಳಿಂದ ದೇಣಿಗೆ ಪಡೆದು ನಿರ್ಮಿಸಲು ಉದ್ದೇಶಿಸಲಾಗಿದೆ.

+ಶ್ರೀ ಮಂಜುನಾಥ ಸಿ.ಕುನ್ನೂರು:- ಸನ್ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಕರ್ನಾಟಕ ರಾಜ್ಯ ಮುಜರಾಯಿ ಇಲಾಖೆಯಿಂದ ರಾಜ್ಯದಲ್ಲಿ ಹಾಗೂ ರಾಜ್ಯದ ಹೊರಗಡೆ ಎಷ್ಟು ಪ್ರವಾಸಿಗರ ಛತ್ರಗಳಿವೆ ಎಂದು ಅದಕ್ಕೆ ಉತ್ತರವಾಗಿ 'ರಾಜ್ಯದ ಒಳಗಡೆ ಮುಜರಾಯಿ ಇಲಾಖೆಯ ನಿರ್ವಹಣೆಯಲ್ಲಿ ಪ್ರವಾಸಿಗರ ಛತ್ರಗಳಿಲ್ಲ, ಹೊರ ರಾಜ್ಯಗಳಾದ ಆಂಧ್ರಪ್ರದೇಶದ ತಿರುಮಲೆ ಶ್ರೀಶೈಲ, ಮಂತ್ರಾಲಯ ಮತ್ತು ಉತ್ತರ ಪ್ರದೇಶದ ವಾರಣಾಸಿಯಲ್ಲಿ ಪ್ರವಾಸಿಗರ ಛತ್ರಗಳಿವೆ ಎಂದು ಹೇಳಿದ್ದಾರೆ. ಈ ರಾಜ್ಯದ ಒಳಗಡೆ ಕೂಡ ಮುಜರಾಯಿ ಇಲಾಖೆಗೆ ಒಳಪಟ್ಟ ಅನೇಕ ದೇವಸ್ಥಾನಗಳು ಇದ್ದು ಉದಾಹರಣೆಗೆ ಧರ್ಮಸ್ಥಳ, ಕೊಲ್ಲೂರು ಮೂಕಾಂಬಿಕಾ, ಸುಬ್ರಹ್ಮಣ್ಯ ದೇವಸ್ಥಾನ, ತಲಕಾಡು, ಬಾದಾಮಿ, ಬನಶಂಕರಿ, ಎಡೆಯೂರು ಸಿದ್ಧಲಿಂಗೇಶ್ವರ, ಇಂತಹ ಅನೇಕ ಯಾತ್ರಿಕರ

ಸ್ಥಳಗಳು ಇದ್ದು ಈ ದೇವಸ್ಥಾನಗಳಿಂದ ಕೂಡ ಹಣ ಸರ್ಕಾರಕ್ಕೆ ಬರುತ್ತಿದೆ. ಇದರಿಂದ ಪ್ರವಾಸಿಗರಿಗೆ ಬಹಳಷ್ಟು ತೊಂದರೆ ಆಗಿದ್ದು ಇಲ್ಲಿ ಕೂಡ ತಾವು ಕೆಲವು ಛತ್ರಗಳನ್ನು ಪ್ರವಾಸಿಗರ ಸಲುವಾಗಿ ಮಾಡಬೇಕು ಎಂದು ತಮಗೆ ಒಂದು ಸಲಹೆಯನ್ನು ಕೊಡುತ್ತಿದ್ದೇನೆ. ಜೊತೆಗೆ ಇವತ್ತು ಆಂಧ್ರ ಪ್ರದೇಶದ ತಿರುಪತಿಯಲ್ಲಿ ಹಾಗೂ ವಾರಣಾಸಿಯಲ್ಲಿ ಕೂಡ ಪ್ರವಾಸಿಗರ ಛತ್ರ ಸರಿಯಾಗಿ ವ್ಯವಸ್ಥೆ ಇಲ್ಲ ಎನ್ನತಕ್ಕದ್ದನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಸರ್ಕಾರದ ಗಮನಕ್ಕೆ ಬಂದಿದೆ ಎಂಬ ವಿಚಾರವನ್ನೂ ಕೂಡ ತಾವು ಒಪ್ಪಿಕೊಂಡಿದ್ದೀರಿ. ಈ ವಿಚಾರದಲ್ಲಿ ಕೇವಲ 18.50 ಲಕ್ಷ ರೂಪಾಯಿಯನ್ನು ಖರ್ಚು ಮಾಡಿ ತಿರುಮಲ ಬೆಟ್ಟದಲ್ಲಿ ತಾವು ಛತ್ರಗಳನ್ನು ಕಟ್ಟುತ್ತಿದ್ದೀರಿ. ಮತ್ತೆ ವಾರಣಾಸಿಯಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ, ಲೋಕೋಪಯೋಗಿ ಇಲಾಖೆಗೆ ತಿಳಿಸಿದ್ದೇವೆ, ಇನ್ನೂ ಐದು ಲಕ್ಷ ಬೇಕು. ರಾಜ್ಯದಲ್ಲಿ ಹೆಚ್ಚು ಆದಾಯವಿರುವ ದೇವಸ್ಥಾನಗಳಿಂದ ದೇಣಿಗೆ ಪಡೆದು ಅದನ್ನು ಸುಧಾರಿಸುತ್ತೇವೆ ಎನ್ನತಕ್ಕದ್ದನ್ನು ಹೇಳಿದ್ದೀರಿ. ದೇವಸ್ಥಾನಗಳ ವಿಚಾರದಲ್ಲಿ ಇವತ್ತು ಕೇವಲ ಐದು ಲಕ್ಷ, ಮೂರು ಲಕ್ಷ ಇಂತಹದನ್ನು ಬಿಡುಗಡೆ ಮಾಡಿ ಅಲ್ಲಿ ಛತ್ರ ಸುಧಾರಣೆ ಮಾಡಲಿಕ್ಕೆ ಹೋದರೆ ಅವು ಕೂಡ ಸರಿಯಾಗಿ ಆಗುವುದಿಲ್ಲ. ಇವಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಅವುಗಳ ಒಂದು ವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ತಮ್ಮ ಮುಖೇಣ ಕೇಳುತ್ತಿದ್ದೇನೆ.

ಶ್ರೀ ಮುನಿಯಪ್ಪ ಮುದ್ದಪ್ಪ:- ನಮ್ಮ ರಾಜ್ಯದಲ್ಲಿ ಮುಜರಾಯಿ ಇಲಾಖೆಯ ನಿರ್ವಹಣೆಯಲ್ಲಿ ಪ್ರವಾಸಿಗರ ಛತ್ರಗಳಿರುವುದಿಲ್ಲ. ಆಂಧ್ರ ಪ್ರದೇಶದಲ್ಲಿ, ಶ್ರೀಶೈಲದಲ್ಲಿ ಮತ್ತು ವಾರಣಾಸಿಯಲ್ಲಿ ಮತ್ತು ಮಂತ್ರಾಲಯದಲ್ಲಿ ಪ್ರವಾಸಿಗರ ಛತ್ರಗಳಿವೆ, ಅದರಂತೆ ಅವುಗಳ ಅಭಿವೃದ್ಧಿಗೆ ನಾವು ವಿಚಾರ ಮಾಡಲಾಗಿ ಆಯಾಯ ಭಾಗದಲ್ಲಿ.....

ಅಧ್ಯಕ್ಷರು:- ಮಾನ್ಯ ಮುನಿಯಪ್ಪನವರೆ, ಮಾನ್ಯ ಸದಸ್ಯರು ಇಷ್ಟೇ ಕೇಳಿದ್ದುದು. ಅವರು ಬಹಳ ಉದ್ದಕ್ಕೆ ಕೇಳಿದ್ದರು. ರಾಜ್ಯದ ಒಳಗಡೆ ಕೂಡ ಮುಜರಾಯಿ ಇಲಾಖೆಯ ವತಿಯಿಂದ ಈ ತರಹದ ಛತ್ರಗಳನ್ನು ನಿರ್ಮಿಸಬೇಕು ಎಂದು ಒಂದು ಸಲಹೆ ಕೊಟ್ಟಿದ್ದಾರೆ. ಎರಡನೆಯದು ರಾಜ್ಯದ ಹೊರಗಡೆ ಇರತಕ್ಕ ಛತ್ರಗಳಿಗೆ ಏನು ತಾವು ಹಣ ನಿಗದಿ ಮಾಡಿದ್ದೀರಿ ಮೂರು ಲಕ್ಷ ಅದು ಸಾಕಾಗುವುದಿಲ್ಲ, ಇನ್ನೂ ಹೆಚ್ಚಿಗೆ ಬೇಕು ಎಂದು ಹೇಳಿದ್ದಾರೆ. ಆ ಎರಡು ಉಪ ಪ್ರಶ್ನೆಗೆ ಉತ್ತರ ಕೊಟ್ಟು ಬಿಡಿ ಸಾಕು.

ಶ್ರೀ ಮುನಿಯಪ್ಪ ಮುದ್ದಪ್ಪ:- ನಮ್ಮ ಕರ್ನಾಟಕ ರಾಜ್ಯದಲ್ಲಿ ಆಯಾಯ ದೇವಾಲಯಗಳಲ್ಲಿ ಅನುದಾನ ಬಹಳಷ್ಟು ಇದೆ. ಅಲ್ಲಿ ಅವರು ಮಾಡಿಕೊಂಡರೆ ನಮ್ಮದೇನೂ ಅಭ್ಯಂತರ ಇಲ್ಲ. ಇಲ್ಲಿಯತನಕ ಅವರು ಸರ್ಕಾರದಿಂದ ಯಾವುದೇ ಅನುದಾನವನ್ನೂ ಕೇಳಿಲ್ಲ. ನಮ್ಮ ಹೊರ ರಾಜ್ಯಗಳಾದಂತಹ ಶ್ರೀಶೈಲದಲ್ಲಿ 16 ರೂಮುಗಳಿವೆ. ಅಲ್ಲಿ ಇನ್ನೂ 16 ರೂಮು ಮತ್ತು ಎರಡು ಕಾಟೇಜ್‌ಗಳನ್ನು ಕಟ್ಟಿಸಬೇಕೆಂದು ನಾವು ಪ್ಲಾನ್ ಮಾಡಿದ್ದೇವೆ. ನಾನು ಮೊನ್ನೆ ವಿಸಿಟ್ ಮಾಡಿ ಬಂದಿದ್ದೇನೆ. ಅದರಂತೆ ಅಲ್ಲಿ ಅವಶ್ಯಕತೆ ಇರತಕ್ಕ ಪ್ರದೇಶದಲ್ಲಿ ನಾವು ಮಾಡಬೇಕೆಂದು

ಸರ್ಕಾರದಲ್ಲಿ ತೀರ್ಮಾನ ಮಾಡಿದ್ದೇವೆ. ಅದರಂತೆ ಮಂತ್ರಾಲಯದಲ್ಲಿ ಸಹಿತ ನಮ್ಮ ಛತ್ರಗಳು ಇದ್ದು ಲಾಭದಾಯಕವಾಗಿ ನಡೆಯುತ್ತಿದೆ. ಅದು ಬಹಳ ಚೆನ್ನಾಗಿ ಸುಸಜ್ಜಿತವಾಗಿ ನಡೆದುಕೊಂಡು ಹೋಗುತ್ತಿದೆ. ಅದನ್ನೂ ಕೂಡ ನಾನು ವೀಕ್ಷಣೆ ಮಾಡಿದ್ದೇನೆ. ಇನ್ನು ಮುಂದೆ ತಿರುಪತಿಯಲ್ಲಿ ಮಾಡತಕ್ಕದ್ದಕ್ಕೆ ಅವರೇ ಉತ್ತರವನ್ನು ಹೇಳಿದರು. ನಾನು ಅದನ್ನು ಪರಿಶೀರಿಸುತ್ತೇನೆ ಹಾಗೂ ಅದರ ವ್ಯವಸ್ಥೆ ಮಾಡಲು ಸರ್ಕಾರ ತೀರ್ಮಾನವನ್ನು ಮಾಡುತ್ತದೆ.

ಅಧ್ಯಕ್ಷರು:- ಆಯಿತು ಇನ್ನೇನೂ ಬೇಡ, ಬಹಳ ಜಾಸ್ತಿ ಆಯಿತು. ವಾರಣಾಸಿಗೂ ಕೊಡಿಸೋಣ ಬಿಡಿ.

ವಿಷಯ:- ಸಕಲೇಶಪುರದಲ್ಲಿ ಕರ್ನಾಟಕ ಗೃಹಮಂಡಳಿ ವತಿಯಿಂದ ನಿರ್ಮಿಸಿದ ಮನೆಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 90 (511)

ಶ್ರೀ ಬಿ.ಬಿ.ಶಿವಪ್ಪ, ಎಂಎಲ್ಎ:- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಕಲೇಶಪುರದಲ್ಲಿ ಕರ್ನಾಟಕ ಗೃಹಮಂಡಳಿ ಕಳೆದ ಮೂರು ವರ್ಷಗಳಲ್ಲಿ ನಿರ್ಮಿಸಿದ ಮನೆಗಳೆಷ್ಟು?

ಆ) ಈ ಪ್ರದೇಶಗಳಲ್ಲಿ ನೀಡುವ ಮೂಲಭೂತ ಸೌಲಭ್ಯಗಳಾವುವು?

ಇ) ಸದರಿ ಮನೆಗಳನ್ನು ಹಂಚಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-

ಅ) ಸಕಲೇಶಪುರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ವಿವಿಧ ವರ್ಗದ ಮನೆಗಳನ್ನು ಈ ಕೆಳಕಂಡಂತೆ ನಿರ್ಮಿಸಲಾಗಿದೆ.

ಇ.ಡಬ್ಲ್ಯೂಎಸ್	- 18
ಎಲ್ಐಜಿ-1	- 20
ಎಲ್ಐಜಿ-2	- 16
ಎಂಐಜಿ-1	- 20
ಎಂಐಜಿ-2	- 08
ಹೆಚ್ಐಜಿ	- 06
	83